ಸಾಧನೆಯಾಗಿಲ್ಲವೆಂದು ಏನು ಹೇಳಿದ್ದಾರೆ, ನಾನು ಆ ಜಿಲ್ಲೆಗಳಿಗೆ ಖುದ್ದಾಗಿ ಭೇಟಿ ಮಾಡಿ ಪರಿಶೀಲನೆ ಮಾಡಿ, ಅಲ್ಲಿ ಕೆಲಸವನ್ನು ಖಂಡಿತ ಮಾಡಿಸುತ್ತೇನೆಂದು ಹೇಳುವುದಕ್ಕೆ ಬಯಸುತ್ತೇನೆ.

ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡುವ ಬಗ್ಗೆ

123 (1101) ಶ್ರೀ ಅಪ್ಪಾಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ (ಬಿಜಾಪುರ ನಗರ):– ಮಾನ್ಯ ಕಾರ್ಮಿಕ ಸಚಿವರು ದಯಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ:–

ಅ) ಬಿಜಾಪುರ ನಗರ ಹಾಗೂ ನಗರದ ಸುತ್ತಮುತ್ತ ಅಂಗಡಿ, ಹೋಟಲ್, ಗ್ಯಾರೇಜುಗಳಲ್ಲಿ ಹಾಗೂ ಇಟ್ಟಿಗೆ ಭಟ್ಟಿ, ಮಂಡಕ್ಕಿ ತಯಾರಿಸುವ ಭಟ್ಟಿಗಳಲ್ಲಿ ಬಾಲ ಕಾರ್ಮಿಕರನ್ನು ಕೆಲಸಕ್ಕೆ ನೇಮಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಇ) ಬಾಲ ಕಾರ್ಮಿಕರಿಂದ ದುಡಿಸಿಕೊಳ್ಳುವವರಿಗೆ ಸರ್ಕಾರ ಯಾವ ಕಠಿಣ ಶಿಕ್ಷೆ ವಿಧಿಸಲಾಗುತ್ತಿದೆ.

ಈ) ಬಾಲ ಕಾರ್ಮಿಕರಿಗೆ ಸರ್ಕಾರ ಯಾವ ಸೌಲಭ್ಯವನ್ನು ಒದಗಿಸಿದೆ.

ಉ) ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು ಸರ್ಕಾರವು ಯಾವ ಕ್ರಮ ಹಾಕಿಕೊಂಡಿದೆ.

ಶ್ರೀ ಬಿ.ಎನ್. ಬಚ್ಚೇಗೌಡ (ಕಾರ್ಮಿಕ ಸಚಿವರು):–

ಅ) ಹೌದು

ಆ) ಬಿಜಾಪುರ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿರುವ ಅಂಗಡಿ, ಹೋಟಲ್, ಗ್ಯಾರೇಜು ಹಾಗೂ ಇಟ್ಟಿಗೆ, ಭಟ್ಟಿ, ಮಂಡಕ್ಕಿ ತಯಾರಿಸುವ ಭಟ್ಟಿಗಳಲ್ಲಿ ಬಾಲ ಕಾರ್ಮಿಕರನ್ನು ಇರಿಸಿಕೊಂಡಿರುವುದನ್ನು ನಿಯಂತ್ರಿಸಲು 2001 ರಿಂದ 2010ರವರೆಗೆ ಸುಮಾರು 1627

ತನಿಖೆಗಳನ್ನು ಕೈಗೊಳ್ಳಲಾಗಿದೆ. 154 ಮಾಲೀಕರು/ಉದ್ಯೋಗದಾತರ ವಿರುದ್ದ ಮೊಕದ್ದಮೆಗಳನ್ನು ದಾಖಲಿಸಲಾಗಿದೆ. 09 ಪ್ರಕರಣಗಳಲ್ಲಿ ರೂಪಾಯಿ 39,100/– ದಂಡ ವಿಧಿಸಲಾಗಿದೆ. ಇದಲ್ಲದೆ, ಜಿಲ್ಲಾ ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನಾ ಸೊಸೈಟಿ ವತಿಯಿಂದ ನಿರಂತರವಾಗಿ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಮಾಲೀಕರು ಮತ್ತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಇ) ಬಾಲ ಕಾರ್ಮಿಕ (ನಿಷೇಧ ಹಾಗೂ ನಿಯಂತ್ರಣ) ಕಾಯ್ದೆ, 1986ರ ಉಲ್ಲಂಘನೆಗಾಗಿ ದಂಡ ಕನಿಷ್ಟ ರೂ. 10,000 ರೂ. 20,000/– ರವರೆಗೆ ಅಥವಾ 3 ರಿಂದ 6 ತಿಂಗಳ ಸೆರೆವಾಸ ವಿಧಿಸಲು ಕಾನೂನು ಇರುತ್ತದೆ.

ಈ) ರಾಜ್ಯ ಬಾಲಕಾರ್ಮಿಕ ಯೋಜನೆಯ ವತಿಯಿಂದ 54 ಶಾಲೆಗಳನ್ನು ಮಂಜೂರು ಮಾಡಲಾಗಿದೆ. ಈ ಪೈಕಿ 52 ಶಾಲೆಗಳು ಕಾರ್ಯ ನಿರ್ವಹಿಸುತ್ತಿದೆ. ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆಯ ವತಿಯಿಂದ 387 ಶಾಲೆಗಳಿಗೆ ಮಂಜೂರಾತಿ ನೀಡಲಾಗಿದೆ. ಈ ಪೈಕಿ 174 ಶಾಲೆಗಳು ಕಾರ್ಯ ನಿರ್ವಹಿಸುತ್ತಿವೆ. 2001 ರಿಂದ 2010ರವರೆಗೆ 1,00,043 ಮಂದಿ ಮಕ್ಕಳಿಗೆ ಪುನರ್‌ವಸತಿ ಕಲ್ಪಿಸಲಾಗಿದೆ.

ಬಿಜಾಪುರ ಜಿಲ್ಲೆಯಲ್ಲಿ ರಾಜ್ಯ ಬಾಲಕಾರ್ಮಿಕ ಯೋಜನೆಯ ವತಿಯಿಂದ 02 ವಸತಿಯುತ ಶಾಲೆಗಳಿಗೆ ಮಂಜೂರಾತಿ ನೀಡಲಾಗಿದೆ ಹಾಗೂ ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆಯ ವತಿಯಿಂದ 31 ಶಾಲೆಗಳಿಗೆ ಮಂಜೂರಾತಿ ನೀಡಲಾಗಿದೆ.

ಉ) * ಬಾಲ ಕಾರ್ಮಿಕ (ನಿಷೇದ ಹಾಗೂ ನಿಯಂತ್ರಣ) ಕಾಯ್ದೆ 1986ರ ಕಲಂ 3ರ ಮತ್ತು ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ, 1961ರ ಕಲಂ 24ರ ಅನುಷ್ಠಾನ.

* ಕಾಯ್ದೆ ಅನುಷ್ಠಾನಕ್ಕೆ ಬಾಲಕಾರ್ಮಿಕ ಕಾಯ್ದೆ, 1986ರ ಅಡಿಯಲ್ಲಿ ವಿವಿಧ ಇಲಾಖೆಗಳ ಒಟ್ಟು 2050 ಅಧಿಕಾರಿಗಳನ್ನು ನಿರೀಕ್ಷಕರೆಂದು ನೇಮಕ ಮಾಡಲಾಗಿದೆ.

* 2001ರಲ್ಲಿ ರಾಜ್ಯ ಬಾಲಕಾರ್ಮಿಕ ನಿರ್ಮೂಲನಾ ಕ್ರಿಯಾ ಯೋಜನೆಯನ್ನು ರಚನೆ ಮಾಡಿ ಜಾರಿಗೆ ತಂದಿದೆ.

* ರಾಜ್ಯ ಕ್ರಿಯಾ ಯೋಜನೆ ಹಾಗೂ ರಾಷ್ಟ್ರೀಯ ಬಾಲಕಾರ್ಮಿಕ ಯೋಜನೆಯ ಮೂಲಕ 2001–02ನೇ ಸಾಲಿನಿಂದ 2009–10ನೇ ಸಾಲಿನವರೆಗೆ ಒಟ್ಟು 1,00,043 ಬಾಲಕಾರ್ಮಿಕರನ್ನು ಮುಖ್ಯವಾಹಿನಿ ಶಾಲೆಗೆ ಸೇರಿಸುವ ಮೂಲಕ ಪುನರ್ವಸತಿ ಕಲ್ಪಿಸಲಾಗಿದೆ.

* ಬಾಲಕಾರ್ಮಿಕರ ಪತ್ತೆಗಾಗಿ ಅಧಿಕಾರಿಗಳ ತಂಡ ರಚಿಸಿ, ಹಠಾತ್ ದಾಳಿ ನಡೆಸುವುದು.

* ಬಾಲ ಕಾರ್ಮಿಕರನ್ನು ಪತ್ತೆ ಹಚ್ಚಿದ ತಕ್ಷಣ, ಬಾಲ ಕಾರ್ಮಿಕರ ಪುನರ್‌ವಸತಿಗೊಳಿಸಲಾಗುವುದು. ಪತ್ತೆ ಹಚ್ಚಿದ ಮಕ್ಕಳನ್ನು ರಾಷ್ಟ್ರೀಯ ಬಾಲ ಕಾರ್ಮಿಕ ಯೋಜನೆಯ ವಿಶೇಷ ದಿನ ಶಾಲೆಗಳು, ರಾಜ್ಯ ಬಾಲ ಕಾರ್ಮಿಕ ಯೋಜನೆಯ ವಿಶೇಷ ವಸತಿ ಶಾಲೆಗಳು ಅಥವ ಮುಖ್ಯವಾಹಿನಿ ಶಾಲೆಗಳಿಗೆ ದಾಖಲೆ ಮಾಡಲಾಗುವುದು.

* ತಪ್ಪಿತಸ್ಥ ಮಾಲೀಕರ ವಿರುದ್ಧ ನ್ಯಾಯಾಲಯದಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸುವುದು.

* ಪ್ರತಿ ಜಿಲ್ಲೆಯಲ್ಲಿ ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಬಾಲ ಕಾರ್ಮಿಕ ಯೋಜನಾ ಸೊಸೈಟಿ ಪ್ರಾರಂಭಿಸಲಾಗಿದೆ (ರಾಮನಗರ, ಯಾದಗಿರಿ, ಚಿಕ್ಕಬಳ್ಳಾಪುರ ಹೊರತುಪಡಿಸಿ). ಇಲ್ಲಿ ಬಾಲ ಕಾರ್ಮಿಕ ಸಲಹಾ ಮಂಡಳಿ (Advisory Committee) ಬಾಲ

ಕಾರ್ಮಿಕ ಕಾರ್ಯಕಾರಿ ಸಮಿತಿ (Executive Committee) ರಚಿಸಲಾಗಿದೆ.

* ಬಾಲ ಕಾರ್ಮಿಕ ಪದ್ಧತಿ ಅನುಷ್ಠಾನ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು, ನಿಯಮಿತವಾಗಿ ಜನಜಾಗೃತಿ ಕಾರ್ಯಕ್ರಮವನ್ನು ಮಾಡಲಾಗುತ್ತಿದೆ ಕರ್ನಾಟಕ ರಾಜ್ಯ ಕಾನೂನು ಅರಿವು ಪ್ರಾಧಿಕಾರದೊಂದಿಗೂ ಸಹ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಕಾನೂನು ಅರಿವು ಕಾರ್ಯಕ್ರಮ ಮಾಡಲಾಗುತ್ತಿದೆ.

* ಪ್ರತಿವರ್ಷ ಜೂನ್ 12 ರಂದು "ವಿಶ್ವ ಬಾಲ ಕಾರ್ಮಿಕ ಪದ್ಧತಿ ವಿರೋಧಿ ದಿನ" ಎಂದು ಆಚರಿಸಲಾಗುತ್ತಿದೆ.

* ಬಾಲ ಕಾರ್ಮಿಕರನ್ನು ನೇಮಕ ಮಾಡಿಕೊಳ್ಳವುದನ್ನು ತಡೆಗಟ್ಟುವ ಸಲುವಾಗಿ ಹಲವಾರು ಜನಜಾಗೃತಿ ಕಾರ್ಯಕ್ರಮಗಳನ್ನು ಇಲಾಖೆಯಿಂದ ಹಮ್ಮಿಕೊಳ್ಳಗಾಗಿದೆ. ಅವುಗಳು ಮುದ್ರಣ, ಎಲೆಕ್ಟ್ರಾನಿಕ್ ಮಾಧ್ಯಮಗಳ ಮುಖಾಂತರ, ಬೀದಿ ನಾಟಕಗಳ ಮೂಲಕ, ಬಿತ್ತಿ ಪತ್ರಗಳು, ಜಾಹೀರಾತು ಫಲಕಗಳ ಮೂಲಕ, ಕರ ಪತ್ರಗಳನ್ನು ವಿತರಿಸುವುದು, ಕಾರ್ಯಾಗಾರ ಮತ್ತು ವಿಚಾರ ಸಂಕೀರ್ಣಗಳನ್ನು ಏರ್ಪಾಡು ಮಾಡುವುದು ಮುಂತಾದ ರೀತಿಯಲ್ಲಿ ಜನ ಜಾಗೃತಿ, ಕಾರ್ಯ ಕ್ರಮಗಳನ್ನು ಮಾಡಲಾಗುತ್ತದೆ.

ಶ್ರೀ ಅಪ್ಪಾಸಾಹೇಬ (ಅಪ್ಪು) ಮಲ್ಲಪ್ಪ ಪಟ್ಟಣಶೆಟ್ಟಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಸಮರ್ಪಕವಾಗಿ ಉತ್ತರವನ್ನು ಒದಗಿಸಿದ್ದಾರೆ. ಆದರೆ ಬಿಜಾಪುರ ಜಿಲ್ಲೆಯಲ್ಲಿ ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡುವುದಕ್ಕೆ ಸರ್ಕಾರ ಹಲವಾರು ಕ್ರಮಗಳನ್ನು ಜರುಗಿಸಿದರೂ ಕೂಡ, ರಾಷ್ಟ್ರೀಯ ಬಾಲ ಕಾರ್ಮಿಕರ ಯೋಜನೆ ವತಿಯಿಂದ ಶಾಲೆಗಳು ಏನು ನಡೆಯುತ್ತವೆ, ಅವುಗಳನ್ನು

ಸರಿಯಾದ ರೀತಿಯಿಂದ ನಡೆಯುತ್ತಿಲ್ಲ. ಅದು ಬೋಗಸ್ ತರಹ ಆಗುತ್ತಿದೆ. ನಾನು ಕಳೆದ ಬಾರಿ ವಿಧಾನ ಸಭೆಯಲ್ಲಿ ಕೂಡ ಪ್ರಶ್ನೆ ಮಾಡಿದ್ದೆನು. ಆಗ ಸರಿಯಾಗಿ ಶಾಲೆಗಳನ್ನು ನಡೆಸುತ್ತಿಲ್ಲ ಮತ್ತು ಬೋಗಸ್ ಎಂದು ತೋರಿಸಿ ಶಾಲೆಗಳನ್ನು ನಡೆಸುತ್ತಿದ್ದಾರೆ ಎನ್ನುವ ಆರೋಪವನ್ನು ನಾನು ಮಾಡಿದಾಗ ಸಂಬಂಧಪಟ್ಟಂತ ಸಚಿವರು ಅದನ್ನು ಒಪ್ಪಿಕೊಂಡಿದ್ದರು. ಅದರ ಬಗ್ಗೆ ಹೆಚ್ಚಿನ ಕ್ರಮವನ್ನು ತೆಗೆದುಕೊಳ್ಳಬೇಕು. ತಾವು ವಿಶೇಷ ಆಸಕ್ತಿ ವಹಿಸಿ ಆ ಬಾಲ ಕಾರ್ಮಿಕರ ಮಕ್ಕಳಿಗೆ ಇಟ್ಟಿರುವ ಅನುದಾನವನ್ನು ದುರುಪಯೋಗ ಮಾಡದಿರುವಂತಹ ರೀತಿಯಲ್ಲಿ ಆ ಶಾಲೆಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಅಧ್ಯಕ್ಷರ ಮುಖಾಂತರ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುತ್ತಿರುವುದು ನಿಜ, ಸ್ವಾಮಿ. ಈ ರಾಷ್ಟ್ರೀಯ ಬಾಲ ಕಾರ್ಮಿಕರ ನಿರ್ಮೂಲನಾ ಯೋಜನೆಯಲ್ಲಿ (NCLP) 354 ಶಾಲೆ ಇದ್ದದ್ದನ್ನು ತಪಾಸಣೆ ಮಾಡಿದಾಗ, ತಾವು ಹೇಳಿದ ಹಾಗೆ ಅನೇಕ ಶಾಲೆಗಳಲ್ಲಿ ಬೇರೆ ಮಕ್ಕಳನ್ನು ಕೂರಿಸುವುದು, ಹಣವನ್ನು ಪಡೆದುಕೊಳ್ಳುವುದು ಮಾಡುತ್ತಿದ್ದರು. ಆ ದೃಷ್ಟಿಯಿಂದ ಇವತ್ತು ಆ ಶಾಲೆಗಳ ಸಂಖ್ಯೆಯನ್ನು 174ಕ್ಕೆ ಇಳಿಸಿ, ಕಡಿಮೆ ಮಾಡಿದ್ದೇವೆ. ಆ ಮಕ್ಕಳಿಗೆ day school ಎಂದು ದಿನದ ಶಾಲೆ ನಡೆಸುವುದಕ್ಕೆ, ಮಧ್ಯಾಹ್ನದ ಬಿಸಿಯೂಟ ಸೇರಿಕೊಂಡು ನಾವು 13 ರೂಪಾಯಿ 60 ಪೈಸೆ ಕೊಡುತ್ತೇವೆ. S.C.L.P. ಎಂದು ರಾಜ್ಯದ ಶಾಲೆಗಳು ವಸತಿ ಶಾಲೆಗಳಾಗಿ ಕೆಲಸ ಮಾಡುತ್ತಿರುವಂತಹ 54 ಶಾಲೆಗಳು ರಾಜ್ಯದಲ್ಲಿ ಇವೆ. ಆ ವಸತಿ ಶಾಲೆ ಮಕ್ಕಳಿಗೆ 24 ರೂಪಾಯಿ ಕೊಡುತ್ತೇವೆ. ತಾವು ಹೇಳಿದಂತಹ ವಿಚಾರದಲ್ಲಿ ತಪಾಸಣೆ ಮಾಡಿ, ಕೇಂದ್ರ ಸರ್ಕಾರಕ್ಕೂ ವರದಿ ಕೊಟ್ಟು, ಹಣ ಕಡಿಮೆ

ಕೊಡುತ್ತಿರುವುದರಿಂದ ಜಾಸ್ತಿ ಕೊಡಬೇಕೆಂದು ಈ ಎಲ್ಲಾ ವಿಷಯಗಳ ಬಗ್ಗೆ ಚರ್ಚೆ ಮಾಡಿ ಮಾತನಾಡಿದ್ದೇವೆ. ತಾವು ಹೇಳಿದಂತೆ ಬಿಜಾಪುರದಲ್ಲಿ ನಾವು ಸಾಕಷ್ಟು ಪ್ರಕರಣಗಳನ್ನು ಪತ್ತೆ ಹಚ್ಚಿದ್ದೇವೆ. ಜಿಲ್ಲಾಧಿಕಾರಿಗಳ ಮೂಲಕ ಮತ್ತು ನಮ್ಮ ಇಲಾಖೆಯ ಅಧಿಕಾರಿಗಳು, ಕಂದಾಯ ಮತ್ತು ಪೊಲೀಸ್ ಇಲಾಖೆಗಳು ಮೂರು ತಿಂಗಳಿಗೊಮ್ಮೆ ತಪಾಸಣೆ ಮಾಡುತ್ತಾರೆ. ಅದರಲ್ಲಿ 1,627 ಪ್ರಕರಣಗಳನ್ನು ನಾವು ಇವತ್ತು ಗುರುತಿಸಿ ತನಿಖೆಗಳನ್ನು ಕೈಗೊಳ್ಳುವಂತೆ ಮಾಡಿದ್ದೇವೆ. 154 ಮಾಲೀಕರ/ಉದ್ಯೋಗದಾತರ ವಿರುದ್ಧ ಮೊಕದ್ದಮೆಗಳನ್ನು ಹಾಕಿದ್ದೇವೆ. ಸುಮಾರು 39,000 ರೂಪಾಯಿ ದಂಡ ವಸೂಲಿ ಮಾಡಿದ್ದೇವೆ. ಸಾಕಷ್ಟು ಬಾಲ ಕಾರ್ಮಿಕರ ಸಂಖ್ಯೆ ಕಡಿಮೆಯಾಗಿದೆ. ಅದರಲ್ಲಿ ಲೋಪ ದೋಷಗಳಿದ್ದರೆ ತಾವು ನನ್ನ ಹತ್ತಿರ ಮಾತನಾಡಿದರೆ ನಾನು ಸರಿಪಡಿಸುವ ಕಾರ್ಯವನ್ನು ಮಾಡುತ್ತೇನೆ.

ಅಧ್ಯಕ್ಷರು:– ಮಾನ್ಯ ಮಹದೇವ ಪ್ರಸಾದ್‌ರವರ ಪ್ರಶ್ನೆಗೆ ಒಂದು ವಾರ ಸಮಯ ಕೇಳಿದ್ದಾರೆ. ಮುಂದಿನ ಸೋಮವಾರ ಉತ್ತರವನ್ನು ಕೊಡಿಸುತ್ತೇನೆ. ಉತ್ತರ ಇಲ್ಲದಿದ್ದ ಮೇಲೆ ನೀವು ಪ್ರಶ್ನೆ ಕೇಳಿ ಏನು ಪ್ರಯೋಜನ? ನೀವು ಪ್ರಶ್ನೆ ಕೇಳಿದರೆ ಅವರ ಹತ್ತಿರ ಉತ್ತರ ಇಲ್ಲವಲ್ಲ?

ಶ್ರೀ ಹೆಚ್.ಎಸ್. ಮಹದೇವ ಪ್ರಸಾದ್:– ಮಾನ್ಯ ಅಧ್ಯಕ್ಷರೆ, ಒಂದು ವಾರ ಕಾಲಾವಕಾಶ ಕೇಳುವಂತಹ ಯಾವುದೇ ಕ್ಲಿಷ್ಟಕರವಾದಂತಹ ವಿಷಯವಿಲ್ಲ. ಆರೋಗ್ಯ ಇಲಾಖೆಯಲ್ಲಿ ಏನೇನು ಕಾರ್ಯಕ್ರಮಗಳಿವೆ? ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಂದಿದೆ? ರಾಜ್ಯ ಸರ್ಕಾರ ಎಷ್ಟು ಹಣ ಖರ್ಚು ಮಾಡುತ್ತಿದೆ? ಎಷ್ಟೆಷ್ಟು ಹಣ ಖರ್ಚಾಗಿದೆ? ಎಂದು ಕೊಡುವುದಕ್ಕೆ ಒಂದು ವಾರ ಕಾಲಾವಾಕಾಶ ಬೇಕೆಂದರೆ ಆ ಇಲಾಖೆ ನಿದ್ದೆ ಮಾಡುತ್ತಿದೆ ಎಂದು ಹೇಳೋಣವೆ? ಆ ಆರೋಗ್ಯ ಇಲಾಖೆ ಆರೋಗ್ಯವಾಗಿ ಇದೆಯೇ? ಮಾನ್ಯ ಮಂತ್ರಿಗಳು ಸ್ವಲ್ಪ ಒತ್ತಡದಲ್ಲಿ busy